**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.997/2022**

ಪಿರ್ಯಾದಿ : ಸಖರಾಯಪಟ್ಟಣ ಪೋಲೀಸರು

-ವಿರುದ್ಧ-

ಆರೋಪಿ : 1. ರಂಜಿತ್ ಟಿ.ಎಲ್. ಬಿನ್ ಲಕ್ಷ್ಮಣ,
ವಯಸ್ಸು ಸುಮಾರು 28 ವರ್ಷ, ಚಾಲಕ ವೃತ್ತಿ,
ವಾಸಃ ತಿಮ್ಮನಹಳ್ಳಿ, ಮರ್ಲೆ ಅಂಚೆ,
ಅಂಬಳೆ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು.
2. ಮನು ಹೆಚ್.ಆರ್. ಬಿನ್ ರೇಣುಕಯ್ಯ,
ವಯಸ್ಸು ಸುಮಾರು 31 ವರ್ಷ, ವ್ಯವಸಾಯ,
ವಾಸಃಲಕ್ಷ್ಮೀಪುರ ಬಡಾವಣೆ ಜಾವಗಲ್,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರ ಪ್ರಕಾರ ಆರೋಪಿಯ ಹೇಳಿಕೆ**

ಪ್ರಃ**1.** ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

**1** ನೇ ಆರೋಪಿಯ ಉತ್ತರಃ ಹೌದು
**2** ನೇ ಆರೋಪಿಯ ಉತ್ತರಃ ಹೌದು

ಪ್ರಃ**2.** ಚಾಸಾ.1 ಬಿ.ಎನ್. ಶಂಕರಲಿಂಗೇಗೌಡ ಇವರನ್ನು ಪ್ರಾಸಾ.1 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ 07-04-2022 ರಂದು ನಮ್ಮ ಊರಾದ ಎಸ್.ಬಿದರೆ ಗ್ರಾಮದಲ್ಲಿ ಜಾತ್ರೆ ಇದ್ದುದ್ದರಿಂದ ತಾನು ತನ್ನ ಕರ್ತವ್ಯಕ್ಕೆ ರಜೆ ಹಾಕಿ ಊರಿಗೆ ಬಂದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**3.** ಪ್ರಾಸಾ.1 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ13.04.2022 ರಂದು ತನ್ನ ಹೆಂಡತಿಯ ಅಕ್ಕನ ಮನೆಯಾದ ಬಾಣೂರಿಗೆ ಹೋಗಿ ಅದೇ ದಿನ ಸಂಜೆ 6.45 ರ ಸಮಯದಲ್ಲಿ ತನ್ನ ಬೈಕಲ್ಲಿ ತಾನು, ತನ್ನ ಹೆಂಡತಿ ಬರುತ್ತಿರುವಾಗ ಕೇತುಮಾರನಹಳ್ಳಿಯ ಮುಂದೆ ಹಳ್ಳಿ ಕೆರೆಯ ಹತ್ತಿರ ನಾನು ಎಡಬದಿಯಲ್ಲಿ ಬರುತ್ತಿರುವಾಗ ಆರೋಪಿತರು ಜೆ.ಸಿ.ಬಿ ಯಲ್ಲಿ ಯಾವುದೇ ಮುನ್ಸೂಚನೆ ನೀಡದೇ ಹೆಡ್ ಲೈಟನ್ನು ಹಾಕದೇ ಹೊಲದಿಂದ ಏಕಾಏಕಿ ರಸ್ತೆಗೆ ಬಂದು ನಾನು ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರ:**4.** ಪ್ರಾಸಾ.1 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಸದರಿ ಅಪಘಾತದಿಂದ ತಾನು ಬೈಕಿನಿಂದ ಕೆಳಗೆ ಬಿದ್ದಿದ್ದು, ತನ್ನ ಎಡಬದಿಯ ಎದೆಯ ಭಾಗದಲ್ಲಿ 6 ಕೀಲು ಮೂಳೆಗಳು ಮುರಿದು ಹೋಗಿರುತ್ತವೆ ಮತ್ತು ತನ್ನ ತಲೆಯ ಎಡಭಾಗದಲ್ಲಿ ತೂತಾದಂತೆ ಗಾಯವಾಗಿತ್ತು ಮತ್ತು ನನ್ನ ಎಡಗೈಗೆ ಬಲವಾಗಿ ಪೆಟ್ಟು ಬಿದ್ದು ಅಲ್ಲಾಡಿಸಲು ಆಗುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**5.** ಪ್ರಾಸಾ.1 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ, ನನ್ನ ಸೊಂಟಕ್ಕೆ ಪೆಟ್ಟು ಬಿದ್ದಿದ್ದು, ತನ್ನ ಹಿಂಬದಿಯಲ್ಲಿ ಕುಳಿತಿದ್ದ ತನ್ನ ಹೆಂಡತಿಗೆ ಕುತ್ತಿಗೆ ಹತ್ತಿರ ಪೆಟ್ಟಾಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**6.** ಪ್ರಾಸಾ.1 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಯಾರೋ ದಾರಿಯಲ್ಲಿ ಹೋಗುತ್ತಿದ್ದವರು ಆ್ಯಂಬುಲೆನ್ಸ್‌ಗೆ ಕರೆ ಮಾಡಿ ಕಡೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಕಡೂರಿನ ಆಸ್ಪತ್ರೆಯಿಂದ ಶಿವಮೊಗ್ಗದ ಎನ್.ಹೆಚ್. ಆಸ್ಪತ್ರೆಗೆ ಕಳಿಸಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**7.** ಪ್ರಾಸಾ.1 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಆರೋಪಿತರು ಚಲಾಯಿಸುತ್ತಿದ್ದ ಜೆ.ಸಿ.ಬಿ.ಯ ಸಂ.ಕೆಎ-13/ಪಿ-7283 ಆಗಿದ್ದು, ತಾನು ಚಲಾಯಿಸುತ್ತಿದ್ದ ಬೈಕ್ ಸಂಖ್ಯೆ ಕೆಎ-18/ಎಕ್ಸ್ 4701 ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**8.** ಪ್ರಾಸಾ.1 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ತಾನು ಶಿವಮೊಗ್ಗದ ಆಸ್ಪತ್ರೆಗೆ ದಾಖಲಾದ ನಂತರ 15 ದಿನ ಚಿಕಿತ್ಸೆ ಪಡೆದು ನಂತರ ಮನೆಗೆ ವಾಪಸ್ಸು ಬಂದಿರುತ್ತೇನೆ, ತಾನು ಆಸ್ಪತ್ರೆಯಲ್ಲಿದ್ದಾಗ ದಿನಾಂಕ:14-04-2022 ರಂದು ಪೊಲೀಸರು ಬಂದು ನಿಪಿ.1 ರಂತೆ ತನ್ನ ಹೇಳಿಕೆ ಪಡೆದಿರುತ್ತಾರೆ ಎಂದು ನುಡಿದು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**9.** ಪ್ರಾಸಾ.1 ರವರನ್ನು ಅಭಿಯೋಜನೆಯವರು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ ದಿನಾಂಕ:04.05.2022 ರಂದು ತಾನು ಪೋಲಿಸ್ ಠಾಣೆಗೆ ಹೋಗಿ ಮರು ಹೇಳಿಕೆ ನೀಡಿರುತ್ತೇನೆ ಎಂದು ಸೂಚಿಸಿದ ಸೂಚನೆಯನ್ನು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**10.** ಚಾಸಾ.2 ಶ್ರೀಮತಿ ಆಶಾ ಇವರನ್ನು ಪ್ರಾಸಾ.2 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕ 13.04.2022 ರಂದು ತಾನು, ತನ್ನ ಗಂಡ ಮತ್ತು ಮಗಳು ಬಾಣೂರಿನ ತನ್ನ ತವರು ಮನೆಗೆ ಹೋಗಿ ಊಟ ಮುಗಿಸಿ ವಾಪಸ್ಸು ಸಂಜೆ 6.00 ಗಂಟೆಗೆ ತಮ್ಮ ಬೈಕ್ ನಂಬರು ಕೆಎ-18/ಎಕ್ಸ್-4701 ರ ಬೈಕಿನಲ್ಲಿ ಎಸ್.ಬಿದರೆಗೆ ಬರುತ್ತಿರುವಾಗ ಕೇತುಮಾರನಹಳ್ಳಿಯಿಂದ ಎಡಬದಿಯ ರಸ್ತೆಯಲ್ಲಿ ಬರುತ್ತಿರುವಾಗ ಜೆ.ಸಿ.ಬಿ.ಯೂ ಹೊಲದ ಪೊದೆಯೊಳಗಿನಿಂದ ಬಂದು ನಮ್ಮ ಬೈಕಿಗೆ ಡಿಕ್ಕಿಪಡಿಸಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**11.** ಪ್ರಾಸಾ.2 ರವರು ಮುಂದುವರೆದು ತನ್ನ ನುಡಿ ಸಾಕ್ಷ್ಯದಲ್ಲಿ ಸದರಿ ಜೆ.ಸಿ.ಬಿ.ನಂಬರು ಕೆಎ-13/ಪಿ-7283 ಆಗಿದ್ದು, ಚಾಲಕ ಯಾವುದೇ ಸೂಚನೆಯನ್ನು ನೀಡದೆ ತಮ್ಮ ಬೈಕಿಗೆ ಡಿಕ್ಕಿಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**12.** ಪ್ರಾಸಾ.2 ರವರು ಮುಂದುವರೆದು ತನ್ನ ನುಡಿ ಸಾಕ್ಷ್ಯದಲ್ಲಿ ಡಿಕ್ಕಿಪಡಿಸಿದ ನಂತರ ತಾವು ಮೂರು ಜನರು ರಸ್ತೆಯ ಮೇಲೆ ಬಿದ್ದಿದ್ದು, ತನ್ನ ಗಂಡನಿಗೆ ತಲೆ, ಹೊಟ್ಟೆ ಮತ್ತು ಎದೆಯ ಭಾಗಕ್ಕೆ ಪೆಟ್ಟುಬಿದ್ದಿದ್ದು, ತನಗೆ ಕುತ್ತಿಗೆ ಭಾಗ ಮತ್ತು ಮೂಗಿಗೆ ಪೆಟ್ಟು ಬಿದ್ದಿದ್ದು, ತನ್ನ ಮಗಳಿಗೆ ಯಾವುದೇ ಪೆಟ್ಟು ಆಗಿರುವುದಿಲ್ಲ. ತಕ್ಷಣ ತಾನು ಚಾಸಾ-3 ರವರಿಗೆ ಫೋನ್ ಕರೆ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**13.** ಪ್ರಾಸಾ.2 ರವರು ಮುಂದುವರೆದು ತನ್ನ ನುಡಿ ಸಾಕ್ಷ್ಯದಲ್ಲಿ ಚಾಸಾ-3 ರವರು ಬರುವಷ್ಟರಲ್ಲಿ ಸ್ಥಳೀಯರು ಆಂಬುಲೆನ್ಸ್ ಗೆ ಫೋನ್ ಮಾಡಿರುತ್ತಾರೆ, ನಂತರ ಚಾಸಾ.3 ರವರು ಅಲ್ಲಿಗೆ ಬಂದು ಅಪಘಾತದ ಬಗ್ಗೆ ತಿಳಿದುಕೊಂಡು ನಂತರ ಆಂಬುಲೆನ್ಸ್ ನಲ್ಲಿ ಕಡೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ತಮ್ಮನ್ನು ಕಳುಹಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**14.** ಪ್ರಾಸಾ.2 ರವರು ಮುಂದುವರೆದು ತನ್ನ ನುಡಿ ಸಾಕ್ಷ್ಯದಲ್ಲಿ ಕಡೂರಿನ ಸರ್ಕಾರಿ ಆಸ್ಪತ್ರೆಯವರು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ನಾರಾಯಣ ಹೃದಯಾಲಯಕ್ಕೆ ಕಳುಹಿಸಿದ್ದು, ಸದರಿ ಆಸ್ಪತ್ರೆಯಲ್ಲಿ ತಾನು ಮತ್ತು ತನ್ನ ಗಂಡ ಚಿಕಿತ್ಸೆಯನ್ನು ಪಡೆದಿರುತ್ತೇವೆ ಎಂದು ನುಡಿದು, ನ್ಯಾಯಾಲಯದ ಮುಂದೆ ಇದ್ದ ಆರೋಪಿಯನ್ನು ನೋಡಿ ಗುರುತಿಸಿ, ಈ ಬಗ್ಗೆ ತಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ

**2** ನೇ ಆರೋಪಿಯ ಉತ್ತರಃ

ಪ್ರ:**15.** ಚಾಸಾ.3 ಕೆ.ಹೆಚ್. ಮಹೇಶ್ವರಪ್ಪ ಇವರನ್ನು ಪ್ರಾಸಾ.3 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕ 13.04.2022 ರಂದು ತಾನು ಮನೆಯಲ್ಲಿ ಇದ್ದಾಗ ಸಂಜೆ 6.50 ಕ್ಕೆ ಚಾಸಾ-2 ರವರು ತನಗೆ ಫೋನ್ ಕರೆ ಮಾಡಿ ಕೇತುಮಾರನಹಳ್ಳಿನಿಂದ ಸ್ವಲ್ಪ ಮುಂದೆ ಅಪಘಾತವಾಗಿರುತ್ತದೆ ಎಂದು ತನಗೆ ತಿಳಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**16.** ಪ್ರಾಸಾ.3 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ತಾನು ಘಟನಾ ಸ್ಥಳಕ್ಕೆ ಹೋಗಿದ್ದು, ತಾನು ಅಲ್ಲಿ ಹೋಗಿ ನೋಡಿದಾಗ, ಚಾಸಾ-1 ರವರಿಗೆ ತಲೆಗೆ, ಹೊಟ್ಟೆಗೆ ಮತ್ತು ಎದೆಗೆ ಪೆಟ್ಟಾಗಿರುತ್ತದೆ ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**17.** ಪ್ರಾಸಾ.3 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಚಾಸಾ-1 ರವರ ಬಾಬ್ತು ಕೆಎ-18/ಎಕ್ಸ್-4701 ಬೈಕಿಗೆ ಕೆಎ-13/ಪಿ-7283 ರ ಜೆ.ಸಿ.ಬಿ. ಅಪಘಾತಪಡಿಸಿರುತ್ತದೆ, ಚಾಸಾ-2 ರವರನ್ನು ತಾನು ಹೇಗೆ ಅಪಘಾತವಾಯಿತು ಎಂದು ಕೇಳಿದಾಗ, ಚಾಸಾ-1 ರವರು ಬೈಕನ್ನು ಚಲಾಯಿಸುತ್ತಿದ್ದು, ನಾನು ಹಿಂಬದಿಯಲ್ಲಿ ಕುಳಿತಿದ್ದು ಜೆ.ಸಿ.ಬಿ.ಯ ಚಾಲಕ ಜಮೀನು ಕಡೆಯಿಂದ ಏಕಾಏಕಿ ಬಂದು ಡಿಕ್ಕಿಪಡಿಸಿರುತ್ತಾನೆ ಎಂದು ತನಗೆ ತಿಳಿಸಿರುತ್ತಾಳೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**18.** ಪ್ರಾಸಾ.3 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ದಾರಿಯಲ್ಲಿ ಹೋಗುವವರು ಆಂಬುಲೆನ್ಸಿಗೆ ಫೋನ್ ಮಾಡಿ ಕರೆಸಿ ಚಾಸಾ-1 ರವರನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**19.** ಪ್ರಾಸಾ.3 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರಿಗೆ ಕಡೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರು ಶಿವಮೊಗ್ಗದ ಎನ್.ಹೆಚ್. ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**20.** ಪ್ರಾಸಾ.3 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ತಾನು ಈ ಪ್ರಕರಣದ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ, ಚಾಸಾ-2 ರವರು ತನಗೆ ಆರೋಪಿಯ ಹೆಸರು ರಂಜಿತ್ ಎಂದು ತಿಳಿಸಿದ್ದು, ತನ್ನ ಮತ್ತು ಚಾಸಾ-5 ಮತ್ತು ಚಾಸಾ-6 ರವರ ಮುಂದೆ ದಿನಾಂಕ 15.04.2022 ರಂದು ಪೊಲೀಸರು ಮಧ್ಯಾಹ್ನ 3.00 ಗಂಟೆಯಿಂದ ಸಂಜೆ 4.00

ಗಂಟೆಯವರೆಗೆ ನಿಪಿ.2 ರಂತೆ ಮಹಜರು ಕ್ರಮವನ್ನು ಕೇತುಮಾರನಹಳ್ಳಿಯಿಂದ ಸ್ವಲ್ಪ ದೂರ ಜರುಗಿಸಿ, ಮಹಜರು ಕಾಲದಲ್ಲಿ ನಿಪಿ.3 ರಂತೆ ಒಂದು ಛಾಯಚಿತ್ರವನ್ನು ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**21.** ಪ್ರಾಸಾ.3 ರವರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ ಮಹಜರನ್ನು ದಿನಾಂಕ 15.04.2022 ರ ಬೆಳಗ್ಗೆ 10.45 ಗಂಟೆಯಿಂದ 11.45 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದು ಸೂಚಿಸಿದ ಸೂಚನೆಯನ್ನು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**22.** ಚಾಸಾ.4 ವಿನಯ್ ಇವರನ್ನು ಪ್ರಾಸಾ.4 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕಃ13.04.2022 ರಂದು ತಾನು ತನ್ನ ಜಮೀನಿನಲ್ಲಿ ಕೆಲಸ ಮಾಡಿಸುತ್ತಿದ್ದೆ, ಸಂಜೆ 6.30 ಕ್ಕೆ ತಮ್ಮ ಕೆಲಸ ಮುಗಿದಿದ್ದು, 1 ನೇ ಆರೋಪಿಯು ಜೆ.ಸಿ.ಬಿ. ಯಲ್ಲಿ ಕೆಲಸ ಮುಗಿಸಿಕೊಂಡು ಹೋಗುತ್ತಿದ್ದಾಗ, ಜಮೀನಿನ ಬಳಿ ಪೋದೆ ಇದ್ದು ಯಾವುದೇ ಸೂಚನೆ ನೀಡಿದ ಜೆ.ಸಿ.ಬಿ.ಚಾಲನೆ ಮಾಡಿಕೊಂಡು ರಸ್ತೆಗೆ ಹೋಗಿದ್ದರಿಂದ ಚಾಸಾ.1 ರವರಿಗೆ ಡಿಕ್ಕಿಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**23.** ಪ್ರಾಸಾ.4 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ 1 ನೇ ಆರೋಪಿ ಚಲಾಯಿಸುತ್ತಿದ್ದ ಜೆ.ಸಿ.ಬಿ. ನೊಂದಣಿ ಸಂಖ್ಯೆಃ ಕೆಎ-13-ಪಿ-7283 ಆಗಿರುತ್ತದೆ ಎಂದು ನುಡಿದು, ನ್ಯಾಯಾಲಯದ ಮುಂದಿರುವ ಆರೋಪಿತರನ್ನುನೋಡಿ ಗುರುತಿಸಿ, ಈ ಬಗ್ಗೆ ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**24.** ಚಾಸಾ.5 ಮಧುಕುಮಾರ್ ಇವರನ್ನು ಪ್ರಾಸಾ.5 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ15.04.2022 ರಂದು ಬೆಳಗ್ಗೆ 10.45 ರಿಂದ 11.45 ರವರೆಗೂ ನಿಪಿ.2 ರಂತೆ ಚಾಸಾ.3 ರವರು ತೋರಿಸಿದ ಸ್ಥಳದಲ್ಲಿ ತನ್ನ ಮತ್ತು ಚಾಸಾ.6 ರವರ ಸಮಕ್ಷಮ ನಿಪಿ.2 ರಂತೆ ಮಹಜರ್ ಕ್ರಮ ಜರುಗಿಸಿ, ನಂತರ ನಿಪಿ.3 ರಂತೆ ಪೋಟೋ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**25.** ಪ್ರಾಸಾ.5 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ, ಅದೇ ದಿನ ಸಖರಾಯಪಟ್ಟಣ ಪೊಲೀಸ್ ಠಾಣೆಗೆ ತನ್ನನ್ನು ಕರೆದುಕೊಂಡು ಹೋಗಿದ್ದು, ತನ್ನ ಮತ್ತು

ಚಾಸಾ.6 ರವರ ಸಮಕ್ಷಮ ಮಧ್ಯಾಹ್ನ 1.30 ರಿಂದ 2 ಗಂಟೆಯವರೆಗೂ ಜೆ.ಸಿ.ಬಿ ಸಂಖ್ಯೆಃಕೆಎ 13-ಪಿ-7283 ಮತ್ತು ಬೈಕ್ ಸಂಖ್ಯೆಃಕೆಎ-18-ಎಕ್ಸ್-4701 ನ್ನು ನಿಪಿ.4 ರಂತೆ ಅಮಾನತ್ತು ಪಡಿಸಿಕೊಂಡಿರುತ್ತಾರೆ ಹಾಗೂ ನಿಪಿ.4 ರ ಕಾಲದಲ್ಲಿ ನಿಪಿ.5 ರಂತೆ ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದು ನುಡಿದು, ಬೈಕಿನ ಮಾಸ್ಕ್ ಒಡೆದು ಹೋಗಿತ್ತು, ಮಡ್‌ಗಾರ್ಡ್ ಮುರಿದಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**26.** ಚಾಸಾ.6 ಮೋಹನ್ ಕುಮಾರ್ ಬಿ.ಎನ್ ಇವರನ್ನು ಪ್ರಾಸಾ.6 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿಃ15.04.2022 ರಂದು ಬೆಳಗ್ಗೆ ಸುಮಾರು 10.15 ರ ಅವಧಿಯಲ್ಲಿ ತಾನು ಮತ್ತು ಚಾಸಾ.5 ರವರು ಬೈಕಿನಲ್ಲಿ ಹೋಗುತ್ತಿದ್ದಾಗ, ಪೊಲೀಸರು ತಮ್ಮನ್ನು ತಡೆದು ನಿಲ್ಲಿಸಿ ಅಪಘಾತದ ವಿಚಾರವಾಗಿ ಮಹಜರಿಗೆ ಬರುವಂತೆ ಕರೆದು ನಮ್ಮ ಸಹಿಯನ್ನು ದಾಖಲೆಗೆ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**27.** ಪ್ರಾಸಾ.6 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ, ಅದೇ ದಿನ ಸಖರಾಯಪಟ್ಟಣ ಪೊಲೀಸ್ ಠಾಣೆಗೆ ತನ್ನನ್ನು ಕರೆದುಕೊಂಡು ಹೋಗಿದ್ದು, ತನ್ನ ಮತ್ತು ಚಾಸಾ.5 ರವರ ಸಮಕ್ಷಮ ಮಧ್ಯಾಹ್ನ 1.30 ರಿಂದ 2.00 ಗಂಟೆಯವರೆಗೂ ನಿಪಿ.4 ರಂತೆ ಅಮಾನತ್ತು ಮಹಜರ್ ಜರುಗಿಸಿ ನಿಪಿ.5 ರಂತೆ ಫೋಟೋ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**28.** ಪ್ರಾಸಾ.6 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ತನ್ನ ಮುಂದೆ ಜೆ.ಸಿ.ಬಿ. ಸಂಖೆಃಕೆಎ 13 ಪಿ 7283 ಮತ್ತು ಬೈಕ್ ಸಂಖ್ಯೆಃಕೆಎ 18 ಎಕ್ಸ್ 4701 ಅನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದು, ಬೈಕಿನ ಮಾಸ್ಕ್ ಒಡೆದುಹೋಗಿತ್ತು ಮಡ್‌ಗಾರ್ಡ್ ಮುರಿದಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**29.** ಪ್ರಾಸಾ.6 ರವರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ ದಿನಾಂಕಃ15.04.2022 ರಂದು ಬೆಳಗ್ಗೆ 10.45 ರಿಂದ 11.45 ರಲ್ಲಿ ಚಾಸಾ.3 ರವರು ತೋರಿಸಿದ ಸ್ಥಳದಲ್ಲಿ ತನ್ನ ಮತ್ತು ಚಾಸಾ.5 ರವರ ಸಮಕ್ಷಮ ನಿಪಿ.2 ರಂತೆ ಮಹಜರ್ ಜರುಗಿಸಿದರು ಎಂಬ ಸೂಚನೆಯನ್ನು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರ:**30.** ಚಾಸಾ.8 ಡಾ: ದೀಪಕ್ ಇವರನ್ನು ಪ್ರಾಸಾ.7 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕ:13.04.2022 ರಂದು ರಾತ್ರಿ 8.00 ಗಂಟೆಗೆ ರಸ್ತೆ ಅಪಘಾತದ ಹಿನ್ನೆಲೆ ಚಿಕಿತ್ಸೆಗಾಗಿ ತನ್ನ ಬಳಿ ಕಡೂರಿನ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು, ತಾನು ಅವರಿಗೆ ಚಿಕಿತ್ಸೆ ನೀಡಿ, ನಿಪಿ.6 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**31.** ಪ್ರಾಸಾ.7 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಅದರಂತೆ ಚಾಸಾ.1 ರವರಿಗೆ ಎದೆ ಮತ್ತು ಹೊಟ್ಟೆ ಭಾಗಕ್ಕೆ ಪೆಟ್ಟಾಗಿದ್ದು, ಸದರಿ ಗಾಯಗಳು ತೀವ್ರ ಸ್ವರೂಪದ ಗಾಯಗಳು ಎಂದ ಪ್ರಮಾಣ ಪತ್ರವನ್ನು ನೀಡಿದ್ದು, ಸಾಮಾನ್ಯವಾಗಿ ಜೆ.ಸಿ.ಬಿ ಬೈಕಿಗೆ ಡಿಕ್ಕಿಪಡಿಸಿದಾಗ ತಾನು ಗಾಯದ ಪ್ರಮಾಣ ಪತ್ರದಲ್ಲಿ ಹೇಳಿದಂತಹ ನೋವುಗಳಾಗುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**32.** ಚಾಸಾ.10 ವಿದ್ಯಾಶಂಕರನಾಯ್ಕ ಇವರನ್ನು ಪ್ರಾಸಾ.8 ಎಂದು ವಿಚಾರಣೆಗೊಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕ:14.04.2022 ರಂದು ತಾನು ಸಖರಾಯಪಟ್ಟಣ ಪೋಲಿಸ್ ಠಾಣೆಯಲ್ಲಿ ಠಾಣಾ ಪ್ರಭಾರೆಯಲ್ಲಿದ್ದಾಗ, ಚಾಸಾ-9 ರವರು ಚಾಸಾ-1 ರವರ ಹೇಳಿಕೆಯನ್ನು ನಿಪಿ-1 ರಂತೆ ಶಿವಮೊಗ್ಗದ ಎನ್.ಹೆಚ್. ಆಸ್ಪತ್ರೆಯಿಂದ ಪಡೆದುಕೊಂಡು ಬಂದು ತನಗೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**33.** ಪ್ರಾಸಾ.8 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಸದರಿ ಹೇಳಿಕೆಯನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 54/2022 ರಂತೆ ಪ್ರಕರಣ ದಾಖಲು ಮಾಡಿ ನಿಪಿ.7 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರ:**34.** ಪ್ರಾಸಾ.8 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ದಿನಾಂಕ:15.04.2022 ರಂದು ಚಾಸಾ-3 ರವರು ತೋರಿಸಿದ ಸ್ಥಳದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ, ಅದೇ ಸಮಯದಲ್ಲಿ ನಿಪಿ-3 ರಂತೆ ಛಾಯಾಚಿತ್ರ ತೆಗೆಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರ: ಸುಳ್ಳು

**2** ನೇ ಆರೋಪಿಯ ಉತ್ತರ: ಸುಳ್ಳು

ಪ್ರಃ**35.** ಪ್ರಾಸಾ.8 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ಅದೇ ದಿನ ಚಾಸಾ.5 ಮತ್ತು ಚಾಸಾ.6 ರವರ ಸಮಕ್ಷಮ 1.30 ರಿಂದ 2.00 ಗಂಟೆ ಸಮಯದಲ್ಲಿ ಸಖರಾಯಪಟ್ಟಣ ಪೋಲಿಸ್ ಠಾಣಾ ಆವರಣದಲ್ಲಿ ನಿಪಿ-4 ರಂತೆ ಮಹಜರ್ ಕ್ರಮ ಜರುಗಿಸಿ ಅಪಘಾತಪಡಿಸಿದ ಜೆ.ಸಿ.ಬಿ. ಕೆಎ-13 ಪಿ-7283 ಮತ್ತು ಅಪಘಾತಕ್ಕೊಳಗಾದ ಬೈಕ್ ಕೆಎ-18-ಎಕ್ಸ್-4701 ವಶಪಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**36.** ಪ್ರಾಸಾ.8 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ಸದರಿ ಬೈಕಿನ ಮಾಸ್ಕ್ ಮತ್ತು ಬಲಭಾಗದ ಸೆಫ್ಟಿ ಗಾರ್ಡ್ ಉಜ್ಜಿ ಹೋಗಿದ್ದು, ಜೆ.ಸಿ.ಬಿ.ಗೆ ಯಾವುದೇ ಹಾನಿಯಾಗಿರುವುದು ಕಂಡುಬಂದಿರುವುದಿಲ್ಲ, ಅದೇ ಸಮಯದಲ್ಲಿ ನಿಪಿ-5 ರಂತೆ ಛಾಯಾಚಿತ್ರ ತೆಗೆಸಿರುತ್ತೇನೆ ಹಾಗೂ ಅದೇ ದಿನ ಚಾಸಾ-2 ರಿಂದ 4 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**37.** ಚಾಸಾ.11 ಹರೀಶ್ ಆರ್ ಇವರನ್ನು ಪ್ರಾಸಾ.9 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ04.05.2022 ರಂದು ಈ ಪ್ರಕರಣದ ಕಡತವನ್ನು ಚಾಸಾ.10 ರವರಿಂದ ಪಡೆದುಕೊಂಡು ಪರಿಶೀಲಿಸಿ, ಈಗಾಗಲೇ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದ ಸ್ಥಳ ಮಹಜರನ್ನು ಹಾಗೂ ವಾಹನದ ಆರ್.ಸಿ. ಮಾಲೀಕರಿಗೆ ಕಲಂ 133 ಐಎಂವಿ ಕಾಯ್ದೆಯಡಿಯಲ್ಲಿ ನೋಟೀಸು ನೀಡಿ ಉತ್ತರವನ್ನು ಪಡೆದುಕೊಂಡಿದ್ದು, ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**38.** ಪ್ರಾಸಾ.9 ರವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಿಪಿ.6 ರ ಚಾಸಾ.1 ರವರ ಗಾಯದ ದೃಢೀಕರಣ ಪತ್ರವನ್ನು ಪರಿಶೀಲಿಸಿ ನೋಡಲಾಗಿ, ಚಾಸಾ.1 ರವರಿಗೆ ಆದ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿದ್ದು, 1 ನೇ ಆರೋಪಿಯಾದ ರಂಜಿತನ ಮೇಲೆ ಕಲಂ 279, 338 ಐಪಿಸಿ ಹಾಗೂ 2 ನೇ ಆರೋಪಿಯ ಮೇಲೆ ವಾಹನಕ್ಕೆ ವಿಮೆ ಮಾಡಿಸದೇ ಇರುವ ಕಾರಣ ಐಎಂವಿ ಕಲಂ 196 ರಂತೆ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**1** ನೇ ಆರೋಪಿಯ ಉತ್ತರಃ ಸುಳ್ಳು

**2** ನೇ ಆರೋಪಿಯ ಉತ್ತರಃ ಸುಳ್ಳು

ಪ್ರಃ**39.** ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ ಅಥವಾ ಲಿಖಿತವಾಗಿ ಹೇಳಿಕೆ ನೀಡುವುದೇನಾದರೂ ಇದೆಯೇ?

**1** ನೇ ಆರೋಪಿಯ ಉತ್ತರಃ ಸುಳ್ಳು ಹೇಳಿರುತ್ತಾರೆ**.** ನನ್ನ ತಪ್ಪಿಲ್ಲ**.**

**2** ನೇ ಆರೋಪಿಯ ಉತ್ತರಃ ಸುಳ್ಳು ಹೇಳಿರುತ್ತಾರೆ**.** ನನ್ನ ತಪ್ಪಿಲ್ಲ**.**

ಪ್ರ:**40.** ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

**1** ನೇ ಆರೋಪಿಯ ಉತ್ತರ: ಇಲ್ಲ

**2** ನೇ ಆರೋಪಿಯ ಉತ್ತರ: ಇಲ್ಲ

(ಈ ಮೇಲ್ಕಂಡ ಹೇಳಿಕೆಯನ್ನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಯಥವತ್ತಾಗಿ ಬರೆದುಕೊಂಡಿದ್ದೇನೆಂದು ಈ ಮೂಲಕ ದೃಢೀಕರಿಸಿದ್ದೇನೆ.)

ದಿನಾಂಕ : 05.06.2026

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕಡೂರು.

**1** ನೇ ಆರೋಪಿ ಸಹಿ:

**1** ನೇ ಆರೋಪಿ ಸಹಿ: